




## ಭಾಗ – 1

ಮಹಾತ್ಮ ಗಾಂಧಿ ಹೈಸ್ಕೂಲಿನ ವಜ್ರ ಮಹೋತ್ಸವಕ್ಕೆ ಮುಖ್ಯಮಂತ್ರಿ ಬರುತ್ತಾರೆಂಬ ಸುದ್ದಿ ಹೊಸಳ್ಳಿ ಮಾತ್ರವಲ್ಲ ಅದರ ಫಾಸಲೆಯ ಹದಿನೆಂಟು ಹಳ್ಳಿಗಳ ಜನರಲ್ಲಿ ಸಂಚಲನವನ್ನೇ ಸೃಷ್ಟಿಸಿತು. ರಾಜಕೀಯ ಜಂಜಾಟಗಳ ನಡುವೆ ಪುರುಸೊತ್ತು ಮಾಡಿಕೊಂಡು ಮುಖ್ಯಮಂತ್ರಿ ಕಾರ್ಯಕ್ರಮಕ್ಕೆ ಬರುತ್ತಾರೊ ಇಲ್ಲವೊ ಎಂಬ ಆತಂಕ ಹೊಸಳ್ಳಿ ಜನರಿಗಿತ್ತು. ಊರ ಮುಖಂಡರ ನಿಯೋಗವೊಂದು ಆರೇಳು ತಿಂಗಳ ಹಿಂದೆ ಕ್ಷೇತ್ರದ ಶಾಸಕರನ್ನು ಮುಂದಿಟ್ಟುಕೊಂಡು ಮುಖ್ಯಮಂತ್ರಿಯವರನ್ನು ಖುದ್ದು ಭೇಟಿಯಾಗಿ ವಜ್ರ ಮಹೋತ್ಸವಕ್ಕೆ ಬರುವಂತೆ ವಿನಂತಿಸಿಕೊಂಡಿದ್ದರು. ದುರ್ಗದ ಸಂಸದರು, ಸೂಗೂರು ಮಠದ ಕಿರಿಯ ಸ್ವಾಮಿಗಳು, ಆಡಳಿತ ಪಕ್ಷದ ಜಿಲ್ಲಾಧ್ಯಕ್ಷರಿಂದ ಪತ್ರ ಬರೆಸಿ ಆಮಂತ್ರಣ ಒಪ್ಪಿಕೊಳ್ಳುವಂತೆ ಒತ್ತಡವನ್ನೂ ಹೇರಿದ್ದರು.

“ಹೈಸ್ಕೂಲಿನ ವಜ್ರ ಮಹೋತ್ಸವ ಅನ್ನೋದು ಒಂದು ನೆಪ ಸಾರ್... ಕಾರ್ಯಕ್ರಮದ ನೆಪದಲ್ಲಿ ಹೊಸಳ್ಳಿಗೆ ಬಂದು ಈ ಭಾಗದ ಜನರ ಕಷ್ಟ ಸುಖಗಳನ್ನು ವಿಚಾರಿಸಿದರೆ ನಿಮ್ಮ ಬಗ್ಗೆ, ನಮ್ಮ ಪಕ್ಷದ ಬಗ್ಗೆ ಜನರಿಗೆ ವಿಶ್ವಾಸ ಹೆಚ್ಚಾಗುತ್ತೆ... ಮುಂದಿನ ಚುನಾವಣೆಯಲ್ಲಿ ಅನುಕೂಲ ಆಗುತ್ತೆ” ಅಂತೆಲ್ಲ ಪಕ್ಷದ ಜಿಲ್ಲಾಧ್ಯಕ್ಷರು, ಶಾಸಕರು ಹೇಳಿದ ಮೇಲೆ ಮುಖ್ಯಮಂತ್ರಿ ಹೊಸಳ್ಳಿಗೆ ಬರಲು ಒಪ್ಪಿದ್ದರು.

“ಹೊಸಳ್ಳಿಯಲ್ಲಿರೋದು ಸರ್ಕಾರಿ ಹೈಸ್ಕೂಲು. ಮಹಾತ್ಮ ಗಾಂಧಿ ಹೈಸ್ಕೂಲು ಎಲ್ಲಿಂದ ಬಂತು?” ಎಂಬ ಅನುಮಾನ ಅಕ್ಕಪಕ್ಕದ ಹಳ್ಳಿಗಳ ಜನರಲ್ಲಿ ಹುಟ್ಟಿಕೊಂಡಿತು. ಕೆಲವರು ಅದನ್ನು ಬಾಯಿ ಬಿಟ್ಟು ಹೇಳಿದರು. ಹೊಸಳ್ಳಿಯಲ್ಲಿ ಗಾಂಧೀಜಿ ಹೆಸರಿನಲ್ಲಿ ಇನ್ನೊಂದು ಹೈಸ್ಕೂಲು ಶುರು ಆಗಬಹುದೆಂದು ಕೆಲವರು ಅರ್ಥಮಾಡಿಕೊಂಡರು.

ಪ್ರಿಯ ಓದುಗರೇ, ಮಹಾತ್ಮ ಗಾಂಧಿ ಹೈಸ್ಕೂಲಿನ ವಜ್ರ ಮಹೋತ್ಸವದ ವಿಚಾರ ತಿಳಿದುಕೊಳ್ಳುವ ಮೊದಲು, ಹೊಸಳ್ಳಿ ಬಗ್ಗೆ ಕೆಲವು ಮಾಹಿತಿಗಳನ್ನು ನೀವು ತಿಳಿದುಕೊಳ್ಳುವ ಅಗತ್ಯವಿದೆ.

ಹೊಸಳ್ಳಿ, ಕರ್ನಾಟಕ – ಆಂಧ್ರ ಗಡಿಯಲ್ಲಿರುವ